# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 963 |
| ಉತ್ತರಿಸಬೇಕಾದ ದಿನಾಂಕ | : | 24.02.2023 |
| ಉತ್ತರಿಸುವ ಸಚಿವರು | : | ಕಾರ್ಮಿಕ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಾರ್ಮಿಕರ ಕನಿಷ್ಠ ಕೂಲಿಯನ್ನು ನಿಗದಿಪಡಿಸಲಾಗಿದೆಯೇ; ಯಾವ ಕೆಲಸಗಳಿಗೆ ಎಷ್ಟು ಕನಿಷ್ಠ ಕೂಲಿಯನ್ನು ನಿಗದಿಪಡಿಸಲಾಗಿದೆ; (ಕಳೆದ 3 ವರ್ಷಗಳ ಕನಿಷ್ಠ ಕೂಲಿ ಸುತ್ತೋಲೆಗಳ ಸಹಿತ ವಿವರ ನೀಡುವುದು) | ಹೌದು, ರಾಜ್ಯದಲ್ಲಿ ಪ್ರಸ್ತುತ 83 ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ದರಗಳನ್ನು ನಿಗದಿಪಡಿಸಿ, ನಿಯಮಾನುಸಾರ ಕಾಲಕಾಲಕ್ಕೆ ವೇತನ ದರಗಳನ್ನು ಪರಿಷ್ಕರಿಸಲಾಗುತ್ತಿದೆ. ಸದರಿ ಅನುಸೂಚಿತ ಉದ್ದಿಮೆಗಳಿಗೆ ಪ್ರಸ್ತುತ ಚಾಲಿಯಲ್ಲಿರುವ ಕನಿಷ್ಠ-ಗರಿಷ್ಠ ವೇತನದ ವಿವರಗಳ ಪಟ್ಟಿಯನ್ನು <u>ಅನುಬಂಧ-1</u> ರಲ್ಲಿ ಸಲ್ಲಿಸಿದೆ.<br><br>ಕನಿಷ್ಠ ವೇತನಕ್ಕೆ ಸಂಬಂಧಿಸಿದಂತೆ ಸರ್ಕಾರವು ಯಾವುದೇ ಸುತ್ತೋಲೆಗಳನ್ನು ಹೊರಡಿಸಿರುವುದಿಲ್ಲ. ಆದರೆ, ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಕನಿಷ್ಠ ವೇತನ ಪಾವತಿಸುವುದಕ್ಕೆ ಸಂಬಂಧಿಸಿದಂತೆ, ಮಾರ್ಗಸೂಚಿಗಳನ್ನು ನೀಡಿ ಸರ್ಕಾರವು ದಿನಾಂಕ: 01-09-2022 ರಂದು ಸುತ್ತೋಲೆಯನ್ನು ಹೊರಡಿಸಿರುತ್ತದೆ. ಸುತ್ತೋಲೆಯ ಪ್ರತಿಯನ್ನು <u>ಅನುಬಂಧ-2</u> ರಲ್ಲಿ ಸಲ್ಲಿಸಿದೆ. |
| ಆ) | ರಾಜ್ಯದಲ್ಲಿರುವ ಕಾರ್ಮಿಕರ ಸಂಖ್ಯೆ ಎಷ್ಟು; ಅದರಲ್ಲಿ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು; ಯಾವ ಆಧಾರದಲ್ಲಿ ಈ ಅಂಕಿ ಅಂಶಗಳನ್ನು ಸರ್ಕಾರ ಸಂಗ್ರಹಿಸುತ್ತಿದೆ; ಈ ಕುರಿತು ಸರ್ಕಾರ ಜನಗಣತಿ/ಮಾದರಿ ಸಮೀಕ್ಷೆ ನಡೆಸಿದೆಯೇ; (ವಿವರ ನೀಡುವುದು) | ರಾಜ್ಯದಲ್ಲಿರುವ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ ಆದ್ದರಿಂದ ನಿಖರ ಸಂಖ್ಯೆ ಲಭ್ಯವಿರುವುದಿಲ್ಲ. ಆದರೆ, ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಂಡಳಿಗಳಲ್ಲಿ ವಿವಿಧ ಯೋಜನೆಗಳಲ್ಲಿ ಫಲಾನುಭವಿಗಳಾಗಿ ನೋಂದಣಿಯಾಗಿರುವ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಸಂಖ್ಯೆ ಲಭ್ಯವಿದ್ದು, ವಿವರ ಈ ಕೆಳಕಂಡಂತಿದೆ.<br><br><u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ</u><br><br>ಈ ಮಂಡಳಿಯ ಫಲಾನುಭವಿಗಳಾಗಿ ಪ್ರಾರಂಭದಿಂದ ಇಲ್ಲಿಯವರೆಗೆ ಅಸಂಘಟಿತ ವಲಯಕ್ಕೆ ಸೇರಿದ 32,92,607 ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ನೋಂದಣಿಯಾಗಿರುತ್ತಾರೆ. ರಾಜ್ಯದಲ್ಲಿರುವ ಕಾರ್ಮಿಕರ ಸಂಖ್ಯೆ ಕುರಿತು ಸಮೀಕ್ಷೆ ನಡೆಸಿರುವುದಿಲ್ಲ.<br><br>ಮಂಡಳಿಯಲ್ಲಿ ಕಾರ್ಮಿಕರೇ ಅರ್ಜಿ ಸಲ್ಲಿಸಿ, ನೋಂದಣಿಯಾಗಲು ಆನ್‌ಲೈನ್ ಮೂಲಕ ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ತಂತ್ರಾಂಶದಲ್ಲಿ ಲಭ್ಯವಿರುವ ಮಾಹಿತಿ ಆಧಾರದ ಮೇಲೆ ಈ ಸಂಖ್ಯೆಯನ್ನು ಪರಿಗಣಿಸಲಾಗುತ್ತಿದೆ.<br><br><u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ</u><br><br>ಅಸಂಘಟಿತ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ, ಈವರೆಗೆ ಕಾರ್ಮಿಕ |

ಇಲಾಖೆಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ. ಆದ್ದರಿಂದ, ಅಸಂಘಟಿತ ಕಾರ್ಮಿಕರ ನಿಖರ ಸಂಖ್ಯೆ ಲಭ್ಯವಿರುವುದಿಲ್ಲ. ಆದರೆ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಗಳಡಿ ನೋಂದಾಯಿತ ಅಸಂಘಟಿತ ಕಾರ್ಮಿಕರು ಹಾಗೂ ಕೋವಿಡ್-19ರ ವಿಶೇಷ ಪ್ಯಾಕೇಜ್ ಅಡಿ ಅರ್ಜಿ ಸಲ್ಲಿಸಿದ ಅಸಂಘಟಿತ ಕಾರ್ಮಿಕರ ಸಂಖ್ಯೆ ಮತ್ತು ಕೇಂದ್ರ ಸರ್ಕಾರವು ಅಸಂಘಟಿತ ಕಾರ್ಮಿಕರ ದತ್ತಾಂಶವನ್ನು ಸಂಗ್ರಹಿಸುವ ಉದ್ದೇಶದಿಂದ, ಅಭಿವೃದ್ಧಿಪಡಿಸಿದ ಇ-ಶ್ರಮ್ ಪೋರ್ಟಲ್‌ನಲ್ಲಿ ನೋಂದಾಯಿತರಾದ ಅಸಂಘಟಿತ ಕಾರ್ಮಿಕರ ಸಂಖ್ಯೆ ಲಭ್ಯವಿದ್ದು, ವಿವರ ಈ ಕೆಳಕಂಡಂತಿದೆ:

| ಯೋಜನೆಗಳು | ಕಾರ್ಮಿಕರ ಸಂಖ್ಯೆ |
|---|---|
| ಅಪಘಾತ ಪರಿಹಾರ ಯೋಜನೆ (ಸಾರಿಗೆ ಇಲಾಖೆಯ ದತ್ತಾಂಶದ ಪ್ರಕಾರ) | **8,40,561** |
| ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ | **2,80,683** |
| ಕೋವಿಡ್-19ರ ವಿಶೇಷ ಪ್ಯಾಕೇಜ್‌ಗಳಡಿ ನೆರವು ಕೋರಿ ಅರ್ಜಿ ಸಲ್ಲಿಸಿದ ಕಾರ್ಮಿಕರು | **14,52,943** |
| ಇ-ಶ್ರಮ್ ಪೋರ್ಟಲ್‌ನಲ್ಲಿ ನೋಂದಾಯಿತರಾದ ಕಾರ್ಮಿಕರು ದಿನಾಂಕ:16-02-23ರವರೆಗೆ | **74,44,124** |
| ಒಟ್ಟು | **1,00,18,311** |

<u>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ</u>

2021-22ನೇ ಸಾಲಿನಲ್ಲಿ 44.32 ಲಕ್ಷ ಸಂಘಟಿತ ಕಾರ್ಮಿಕರು ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ವಂತಿಕೆ ಪಾವತಿಸಿರುತ್ತಾರೆ.

ಇ) ರಾಜ್ಯದಲ್ಲಿ ಕಾರ್ಮಿಕರ ಕನಿಷ್ಠ ಕೂಲಿ ಯಾವ ವರ್ಗಗಳ ಕಾರ್ಮಿಕರಿಗೆ ಅನ್ವಯವಾಗುತ್ತದೆ; ಕಾರ್ಮಿಕರ ವ್ಯಾಖ್ಯಾನ ಏನು; ಕೆಲವರು ನಿಜವಾಗಿ ಕಾರ್ಮಿಕರಾಗಿದ್ದರೂ ಕಾರ್ಮಿಕ ವ್ಯಾಪ್ತಿಯಿಂದ ಹೊರಗುಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅವರನ್ನು ಕನಿಷ್ಠ ಕೂಲಿಯ ವ್ಯಾಪ್ತಿಯೊಳಗಿರಿಸಲು ಸರ್ಕಾರದ ಕ್ರಮಗಳೇನು; (ವಿವರ ನೀಡುವುದು)

ರಾಜ್ಯದಲ್ಲಿ ಪ್ರಸ್ತುತ 83 ಉದ್ದಿಮೆಗಳನ್ನು ಗುರುತಿಸಿ ಕನಿಷ್ಠ ವೇತನ ಕಾಯ್ದೆ, 1948 ರ ಅನುಸೂಚಿಗೆ ಸೇರ್ಪಡೆಗೊಳಿಸಲಾಗಿದ್ದು, ಸದರಿ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ದರಗಳನ್ನು ನಿಗದಿಪಡಿಸಿ, ನಿಯಮಾನುಸಾರ ಕಾಲಕಾಲಕ್ಕೆ ವೇತನ ದರಗಳನ್ನು ಪರಿಷ್ಕರಿಸಲಾಗುತ್ತಿದೆ. ಅನುಸೂಚಿತ ಉದ್ದಿಮೆಗಳ ಪಟ್ಟಿಯನ್ನು <u>ಅನುಬಂಧ-3</u> ರಲ್ಲಿ ಸಲ್ಲಿಸಿದೆ.

ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 2(ಐ) ಅನ್ವಯ "ಕಾರ್ಮಿಕ" ಪದದ ವ್ಯಾಖ್ಯಾನ ಈ ಕೆಳಕಂಡಂತಿರುತ್ತದೆ;

***(i) "Employee" means any person who is employed for hire or reward to do any work, skilled or unskilled, manual or clerical, in a scheduled employment in respect of which minimum rates of wages have been fixed; and includes an out-worker to whom any articles or***

| | | |
|---|---|---|
| | | ***materials are given out by another person to be made up, cleaned, washed, altered, ornamented, finished, repaired, adapted or otherwise processed for sale for the purposes of the trade or business of that other person where the process is to be carried out either in the home of the out-worker or in some other premises not being premises under the control and management of that other person; and also includes an employee declared to be an employee by the appropriate Government; but does not include any member of the Armed Forces of the [Union]***<br><br>ಸರ್ಕಾರವು *"ಅನುಸೂಚಿತ ಪಟ್ಟಿಗೆ ಸೇರದ ಉದ್ದಿಮೆಯ ಕೆಲಸದಲ್ಲಿ ಉದ್ಯೋಗ"* ಉದ್ದಿಮೆಯನ್ನು ಕಾಯ್ದೆಯ ಅನುಸೂಚಿಗೆ ಸೇರ್ಪಡೆಗೊಳಿಸಿ, ಕನಿಷ್ಠ ವೇತನ ದರಗಳನ್ನು ನಿಗದಿಪಡಿಸಿ ಕಾಲಕಾಲಕ್ಕೆ ಪರಿಷ್ಕರಣೆಗೊಳಿಸುತ್ತಿದೆ. ಇದರಿಂದ ಯಾವುದೇ ಅನುಸೂಚಿತ ಉದ್ದಿಮೆಗೆ ಸೇರದ ಕಾರ್ಮಿಕರೂ ಸಹ ಕನಿಷ್ಠ ವೇತನ ಪಡೆಯಬಹುದಾಗಿರುತ್ತದೆ. |
| ಈ) | ಕಾರ್ಮಿಕರ ಕನಿಷ್ಟ ಕೂಲಿಯನ್ನು ಹೇಗೆ ನಿಗದಿಪಡಿಸಲಾಗುತ್ತಿದೆ; ಪ್ರಾಮುಖ್ಯತೆ ನೀಡಲಾಗುತ್ತಿರುವ ಅಂಶಗಳಾವುವು; ಕಾರ್ಮಿಕರು ಇರುವ ಸ್ಥಳ, ಅಲ್ಲಿನ ಕನಿಷ್ಟ ಜೀವನ ವೆಚ್ಚ, ಅಗತ್ಯವಾಗಿ ಬೇಕಾಗಿರುವ ಮೂಲಭೂತ ಸೌಕರ್ಯ, ಇತ್ಯಾದಿಗಳನ್ನು ಪರಿಗಣಿಸಲಾಗುತ್ತದೆಯೇ; ಈ ಬಗ್ಗೆ ಅನುಸರಿಸುತ್ತಿರುವ ವಿಧಿ ವಿಧಾನಗಳೇನು; (ವಿವರ ನೀಡುವುದು) | ರಾಜ್ಯ ಸರ್ಕಾರವು ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 5(1)(ಎ) ಹಾಗೂ ಕಲಂ 5(1)(ಬಿ) ರಡಿ ವಿಧಿಸಿರುವ ಪದ್ಧತಿಗಳನ್ವಯ ಗೌರವಾನ್ವಿತ ಭಾರತದ ಸರ್ವೋಚ್ಚ ನ್ಯಾಯಾಲಯವು ಮೆ: ರೆಪ್ಟೋಕಾಸ್ ಬ್ರೆಟ್ ಅಂಡ್ ಕಂಪನಿ ಲಿಮಿಟೆಡ್, ಪ್ರಕರಣದಲ್ಲಿ ನೀಡಿರುವ ತೀರ್ಪು (1992 ಎಐಆರ್ 504) ಹಾಗೂ ಶ್ರೀ ವಿ. ಶಾಂತಪ್ಪ ಸಮಿತಿಯ ವರದಿಗಳನ್ನಾಧರಿಸಿ ಕನಿಷ್ಠ ವೇತನ ನಿಗದಿ ಮಾಡುವ ಕ್ರಮವನ್ನು ಕೈಗೊಳ್ಳುತ್ತಿದೆ. ಈ ಲೆಕ್ಕಾಚಾರದ ಪ್ರಕ್ರಿಯೆಯ ನಂತರ ಬರುವ ಮೊತ್ತವನ್ನು ಮೂಲ ವೇತನವಾಗಿ ಪರಿಗಣಿಸಿ ಹಾಗೂ ಕರಡು ಅಧಿಸೂಚನೆಯನ್ನು ಪ್ರಕಟಿಸಿ, ಸ್ವೀಕೃತವಾಗುವ ಸಲಹೆ / ಆಕ್ಷೇಪಣೆಗಳನ್ನು ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯಲ್ಲಿ ಚರ್ಚಿಸಲಾಗುತ್ತದೆ ಹಾಗೂ ಮಂಡಳಿಯ ಸರ್ವ ಸದಸ್ಯರ ಅಭಿಪ್ರಾಯಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ತದನಂತರ ಸರ್ಕಾರವು 1948 ರ ಕನಿಷ್ಠ ವೇತನ ಕಾಯ್ದೆಯ (ಕೇಂದ್ರ ಕಾಯ್ದೆ ಸಂಖ್ಯೆ: XI) ರ ಕಲಂ 3(1)(ಬಿ) ಮತ್ತು 5(1)(ಎ) / 5(1)(ಬಿ) ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆಗಳನ್ನು ಹೊರಡಿಸುತ್ತದೆ.<br><br>2015-16ನೇ ಸಾಲಿನಲ್ಲಿ ರಾಜ್ಯದ 16 ಕೇಂದ್ರಗಳಿಂದ ಅಗತ್ಯ ವಸ್ತುಗಳ ಬೆಲೆಗಳ ಮಾಹಿತಿಯನ್ನು ಸಂಗ್ರಹಿಸಿ, ಬೆಲೆಗಳ ಸರಾಸರಿ ಮೊತ್ತವನ್ನು ಲೆಕ್ಕಾಚಾರ ಮಾಡಿ ವೇತನ ಪರಿಷ್ಕರಣೆ ಮಾಡಲಾಗಿತ್ತು. ಪ್ರಸ್ತುತ ಹೊಸದಾಗಿ ಅನುಸೂಚಿಗೆ ಸೇರ್ಪಡೆಗೊಳಿಸಲಾಗಿರುವ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ದರಗಳನ್ನು ಪ್ರಥಮ ಬಾರಿಗೆ ನಿಗದಿಗೊಳಿಸುವ ಸಲುವಾಗಿ ರಾಜ್ಯದ 16 ಕೇಂದ್ರಗಳಿಂದ ಅಗತ್ಯ ವಸ್ತುಗಳ ಬೆಲೆಗಳ ಮಾಹಿತಿಯನ್ನು ಸಂಗ್ರಹಿಸುವ ಪ್ರಕಿಯೆ ಜಾರಿಯಲ್ಲಿರುತ್ತದೆ. |

| | | |
|---|---|---|
| ಉ) | ಖಾಸಗಿ ರಂಗದ ಸಂಸ್ಥೆಗಳಲ್ಲಿ ಪಾಲುದಾರರ ಸಂಖ್ಯೆಗಳನ್ನು ದಾಖಲೆ ಮುಖಾಂತರ ಹೆಚ್ಚಿಸಿ ಕಾರ್ಮಿಕರಿಗೆ ನೀಡಬೇಕಾದ ಸೌಲಭ್ಯಗಳಿಂದ ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇಂತಹ ಲೋಪದೋಷಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಕಾರ್ಮಿಕರಿಗೆ ಕಾರ್ಮಿಕ ಕಾಯ್ದೆಗಳನ್ವಯ ಅನ್ವಯಿಸುವ ಶಾಸನಾತ್ಮಕವಾಗಿ ಸಿಗಬೇಕಾದಂತಹ ಉಪಧನ, ಕನಿಷ್ಟ ವೇತನ, ಬೋನಸ್‌ಗಳನ್ನು ಆಯಾ ಕಾಯ್ದೆಗಳನ್ವಯ ಅನುಷ್ಠಾನ ಮಾಡುಲಾಗುತ್ತಿದೆ. ವಂಚಿತರಾದ ಕಾರ್ಮಿಕರಿಗೆ ಪರಿಶೀಲಿಸಿ ಶಾಸನಾತ್ಮಕ ಸೌಲಭ್ಯಗಳನ್ನು ಪಡೆದುಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. |
| ಊ) | ಹೊರಗುತ್ತಿಗೆ ಆಧಾರದಲ್ಲಿ ಸರ್ಕಾರಿ ಸೇವೆಗಳಿಗೆ ಸಿಬ್ಬಂದಿ ಒದಗಿಸಿ ಮತ್ತು ಕೆಲವು ಕೆಲಸಗಳನ್ನು ಸ್ವಯಂಸೇವೆ ವ್ಯಾಖ್ಯಾನದಡಿ ಪಡೆದು ಕಾರ್ಮಿಕರನ್ನು ಸೌಲಭ್ಯಗಳಿಂದ ವಿರಹಿತಗೊಳಿಸುವ ಬಗ್ಗೆ ಸರ್ಕಾರದ ನಿಲುವೇನು? (ವಿವರ ನೀಡುವುದು) | ಇಲಾಖೆಯಲ್ಲಿ ಸಿಬ್ಬಂದಿಗಳನ್ನು ಸ್ವಯಂ ಸೇವಾ ವ್ಯಾಖ್ಯಾನದಡಿ ಪಡೆದುಕೊಳ್ಳುವ ಪದ್ಧತಿ ಇರುವುದಿಲ್ಲ. ಮಂಡಳಿಯ ಕೇಂದ್ರ ಕಛೇರಿಯಲ್ಲಿ ಹಾಗೂ ಕಾರ್ಮಿಕ ಇಲಾಖೆಯ ಕ್ಷೇತ್ರ ಮಟ್ಟದ ಅಧಿಕಾರಿಗಳ ಕಛೇರಿಗಳಲ್ಲಿ ಮಾನವ ಸಂಪನ್ಮೂಲ ಏಜೆನ್ಸಿಗಳ ಮೂಲಕ ಹೊರಗುತ್ತಿಗೆಯ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡಿ ಅವರಿಗೆ ವ್ಯತ್ಯಸ್ಥ ತುಟ್ಟಿ ಭತ್ಯೆಯ ಸಹಿತ ಮಾಸಿಕ ವೇತನವನ್ನು ಪಾವತಿ ಮಾಡಲಾಗುತ್ತಿದೆ. |

ಸಂಖ್ಯೆ: ಕಾಇ 79 ಎಲ್‌ಡಬ್ಲ್ಯೂಎ 2023

(ಅರಬೈಲ್ ಶಿವರಾಮ್ ಹೆಬ್ಬಾರ್)
ಕಾರ್ಮಿಕ ಸಚಿವರು

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 963 ಕ್ಕೆ ಅನುಬಂಧ-1

| 2022-23ನೇ ಸಾಲಿನ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ನಿಗದಿ ಮತ್ತು ಪರಿಷ್ಕರಣೆ ಕುರಿತ ಕನಿಷ್ಠ ಮತ್ತು ಗರಿಷ್ಠ ವೇತನ ದರಗಳ ವಿವರಣೆ | | | | | |
|---|---|---|---|---|---|
| ಕ್ರ ಸಂ | ಅನುಸೂಚಿತ ಉದ್ದಿಮೆಯ ಹೆಸರು | ಕನಿಷ್ಠ ವೇತನ ದರಗಳು (2022-23) ರೂ.ಗಳಲ್ಲಿ | | | |
| | | ದೈನಿಕ | | ಮಾಸಿಕ | |
| | | ಕನಿಷ್ಠ | ಗರಿಷ್ಠ | ಕನಿಷ್ಠ | ಗರಿಷ್ಠ |
| 1 | ಬೇಸಾಯ ಮತ್ತು ಸಂಬಂಧಿತ ಕೆಲಸಗಳಲ್ಲಿ ಉದ್ಯೋಗ | 460.89 | 460.89 | 11983.16 | 11983.16 |
| 2 | ಲಘು ಪಾನೀಯ ಸೋಡಾ ಸಹಿತ ಎಲ್ಲಾ ಇಂಗಾಲಾಮ್ಲಿತ ಪಾನೀಯ, ಮಿನರಲ್ (ಖನಿಜ) ನೀರು ಮತ್ತು ಜ್ಯೂಸ್ (ಹಣ್ಣಿನ ರಸ) ಉತ್ಪಾದನೆ ಹಾಗೂ ಸಂಬಂಧಪಟ್ಟ ಪ್ರಕ್ರಿಯೆಗಳಲ್ಲಿ ಉದ್ಯೋಗ. | 447.06 | 702.44 | 11623.67 | 18263.39 |
| 3 | ಅಗರಬತ್ತಿ ತಯಾರಿಕೆ ಮತ್ತು ಸಾಂಬ್ರಾಣಿ (ಇನ್‌ಸೆನ್ಸ್) ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗ | 443.91 | 463.14 | 11541.60 | 12041.60 |
| 4 | ಅಡಿಕೆ (ಸುಪಾರಿ) ಉದ್ದಿಮೆಗಳಲ್ಲಿ ಉದ್ಯೋಗ | 470.89 | 531.58 | 12243.20 | 13821.03 |
| 5 | ಸ್ವಯಂಯಾನ ಯಂತ್ರ ಶಾಸ್ತ್ರ (ಆಟೋಮೊಬೈಲ್ ಇಂಜಿನಿಯರಿಂಗ್) (ಉತ್ಪಾದನೆ, ಅಸೆಂಬ್ಲಿಂಗ್, ಬಾಡಿ ಬಿಲ್ಡಿಂಗ್, ಸರ್ವೀಸಿಂಗ್ ಮತ್ತು ರಿಪೇರಿ ಕೆಲಸಗಳ ಸಹಿತ) | 451.22 | 577.22 | 11731.60 | 15007.60 |
| 6 | ಬೇಕರಿ ಉದ್ದಿಮೆ ಮತ್ತು ಬೇಕಿಂಗ್ ಪ್ರಕ್ರಿಯೆಗಳಲ್ಲಿ ಉದ್ಯೋಗ. | 470.89 | 679.10 | 12243.20 | 17656.60 |
| 7 | ಬೀಡಿ ತಯಾರಿಕೆ ಪ್ರಕ್ರಿಯೆಯಲ್ಲಿ ಉದ್ಯೋಗ | 471.77 | 648.69 | 12266.00 | 16866.00 |
| 8 | ತಂಬಾಕು ಸಂಸ್ಕರಣಾ ಉದ್ದಿಮೆಗಳಲ್ಲಿ ಉದ್ಯೋಗ | 470.89 | 679.10 | 12243.20 | 17656.60 |

| | | | | | |
|---|---|---|---|---|---|
| 9 | ಬಿಸ್ಕತ್ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ | 470.89 | 625.17 | 12243.20 | 16254.47 |
| 10 | ಹಿತ್ತಾಳೆ, ತಾಮ್ರ, ಅಲ್ಯೂಮಿನಿಯಂ, ಉಕ್ಕು (ಸ್ಟೀಲ್), ಹಿಂಡಾಲಿಯಮ್ ಪಾತ್ರೆಗಳು ಮತ್ತು ಇತರೆ ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗ | 470.89 | 679.10 | 12243.20 | 17656.60 |
| 11 | ಇಟ್ಟಿಗೆ ತಯಾರಿಕೆ ಹಾಗೂ ಪೂರ್ವ ಒತ್ತಡ (ಪ್ರೀ- ಸ್ಟ್ರೆಸ್ಡ್) ದೊಂದಿಗೆ ತಯಾರಿಸಿದ ಉತ್ಪನ್ನಗಳ ತಯಾರಿಕೆಯ ಉದ್ದಿಮೆಗಳಲ್ಲಿ ಉದ್ಯೋಗ | 470.89 | 548.69 | 12243.20 | 14265.82 |
| 12 | ಮರದ ಕೆಲಸ [ಕಾರ್ಪೆಂಟರಿ] ಹಾಗೂ ಮರ ಕೊಯ್ಯುವ [ಸಾಮಿಲ್] ಸಂಸ್ಥೆಗಳಲ್ಲಿ ಉದ್ಯೋಗ | 470.89 | 679.10 | 12243.20 | 17656.60 |
| 13 | ಬೆಂಕಿ ಪೊಟ್ಟಣ ತಯಾರಿಕೆ ಉದ್ದಿಮೆಗಳಲ್ಲಿ ಉದ್ಯೋಗ | ಅನುಸೂಚಿಯಿಂದ ಕೈ ಬಿಡಲಾಗಿದೆ | | | |
| 14 | ಪ್ಲೈವುಡ್ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ | 470.89 | 679.10 | 12243.20 | 17656.60 |
| 15 | ಮರದ ದಿಮ್ಮಿಗಳ ಘಟಕಗಳಲ್ಲಿ ಉದ್ಯೋಗ. | 447.06 | 640.66 | 11623.67 | 16657.20 |
| 16 | ವಿನೀರ್ ಉದ್ದಿಮೆಗಳಲ್ಲಿ ಉದ್ಯೋಗ | 451.22 | 515.22 | 11731.60 | 13395.60 |
| 17 | ಏಲಕ್ಕಿ ಮಲೈಗಳು ಮತ್ತು ಏಲಕ್ಕಿ ತೋಟಗಳಲ್ಲಿ ಉದ್ಯೋಗ | 470.89 | 679.10 | 12243.20 | 17656.60 |
| 18 | ಗೋಡಂಬಿ ಸಂಸ್ಕರಣಾ ಉದ್ದಿಮೆಗಳಲ್ಲಿ ಉದ್ಯೋಗ. | 441.77 | 496.77 | 11486.00 | 12916.00 |
| 19 | ಜೇಡಿ ಮಣ್ಣಿನ ಮಡಿಕೆಗಳು, ಸಿರಾಮಿಕ್ಸ್ ಸ್ಟೋನ್ ವೇರ್ ಮತ್ತು ಇತರೆ ಉತ್ಪನ್ನಗಳ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ | 451.22 | 523.22 | 11731.60 | 13603.60 |
| 20 | ಸಿಂಕೋನಾ, ರಬ್ಬರ್, ಟೀ & ಕಾಫೀ ತೋಟಗಳಲ್ಲಿ ಉದ್ಯೋಗ (ಕಛೇರಿ ಸಿಬ್ಬಂದಿಗಳನ್ನು ಹೊರತುಪಡಿಸಿ) | 385.00 | 419.54 | 10010.00 | 10908.00 |

| | | | | | |
|---|---|---|---|---|---|
| 21 | ಸಿಂಕೋನಾ, ರಬ್ಬರ್, ಟೀ & ಕಾಫೀ ತೋಟಗಳಲ್ಲಿ ಉದ್ಯೋಗ (ಕಛೇರಿ ಸಿಬ್ಬಂದಿಗಳು) | 376.77 | 381.77 | 9796.00 | 9926.00 |
| 22 | ರಾಸಾಯನಿಕ ರಸಗೊಬ್ಬರ, ಕೀಟ ನಾಶಕ, ಕ್ರಿಮಿನಾಶಕ ಉತ್ಪಾದನಾ ಉದ್ದಿಮೆಯ ಕೆಲಸಗಳಲ್ಲಿ ಯೋಜನೆ | 470.89 | 679.10 | 12243.20 | 17656.60 |
| 23 | ಕ್ಲಬ್‌ಗಳಲ್ಲಿ ಉದ್ಯೋಗ | 492.75 | 687.80 | 12811.40 | 17882.72 |
| 24 | ಕಾಫಿ ಕ್ಯೂರಿಂಗ್ ಸಂಸ್ಥೆಗಳಲ್ಲಿ ಉದ್ಯೋಗ. | 468.12 | 512.46 | 12171.00 | 13324.00 |
| 25 | ಮಿಠಾಯಿ ತಯಾರಿಸುವ (ಕನ್‌ಫೆಕ್ಷನರಿ) ಉದ್ದಿಮೆಗಳಲ್ಲಿ ಉದ್ಯೋಗ. | 470.89 | 625.17 | 12243.20 | 16254.47 |
| 26 | ಹತ್ತಿ ಹೆಕ್ಕುವ, ಅಮುಕುವ ಮತ್ತು ಸಂಬಂಧಪಟ್ಟ ಪ್ರಕ್ರಿಯೆಗಳ ಕೆಲಸಗಳಲ್ಲಿ ಉದ್ಯೋಗ. | 453.78 | 511.34 | 11798.28 | 13294.80 |
| 27 | ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಉದ್ಯೋಗ | 447.06 | 666.77 | 11623.67 | 17335.97 |
| 28 | ಗೃಹಕೃತ್ಯ ಸಹಾಯಕರು, ಮಕ್ಕಳ ಪೋಷಣಾ ಸಹಾಯಕರು, ಹೋಮ್ ನರ್ಸ್‌ಗಳ ಸಹಿತ ವಾಸದ ಮನೆಗಳಲ್ಲಿ ಗೃಹ ಕೆಲಸಗಳ ಉದ್ಯೋಗ | 466.48 | 701.24 | 12128.57 | 18232.35 |
| 29 | ಎಲೆಕ್ಟ್ರಾನಿಕ್ಸ್ ಉದ್ದಿಮೆಗಳಲ್ಲಿ ಉದ್ಯೋಗ | 492.73 | 724.40 | 12810.92 | 18834.39 |
| 30 | ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರೋಪ್ಲೇಟಿಂಗ್ ಉದ್ದಿಮೆಗಳಲ್ಲಿ ಉದ್ಯೋಗ. | 492.73 | 702.44 | 12810.92 | 18263.39 |
| 31 | ಅನುಸೂಚಿತ ಪಟ್ಟಿಗೆ ಸೇರದ ಉದ್ದಿಮೆಯ ಕೆಲಸದಲ್ಲಿ ಉದ್ಯೋಗ. ಕರ್ನಾಟಕ ರಾಜ್ಯ ತಳ ಹಂತದ ಕನಿಷ್ಠ ವೇತನ. | 470.89 | 679.10 | 12243.20 | 17656.60 |

| | | | | | |
|---|---|---|---|---|---|
| 32 | ಇಂಜಿನಿಯರಿಂಗ್, ಪ್ಯಾಬ್ರಿಕೇಷನ್ ಹಾಗೂ ಸಂಬಂಧಪಟ್ಟ ಉದ್ದಿಮೆಯ ಕೆಲಸಗಳಲ್ಲಿ ಉದ್ಯೋಗ | 470.89 | 679.10 | 12243.20 | 17656.60 |
| 33 | ಚಲನಚಿತ್ರ (ಸಿನಿಮಾ / ಕಿರು ಚಿತ್ರ) ಉದ್ದಿಮೆಗಳ ನಿರ್ಮಾಣ, ವಿತರಣೆ, ಜಾಹಿರಾತು ಹಾಗೂ ಸಂಬಂಧಪಟ್ಟ ಕೆಲಸಗಳಲ್ಲಿ ಉದ್ಯೋಗ | 446.90 | 660.63 | 11619.38 | 17176.25 |
| 34 | ಮೀನು ಹಿಡಿಯುವುದು, ಮೀನು ಸಂಸ್ಕರಣೆ, ಮೀನು ಪೀಲಿಂಗ್, ಸೀಗಡಿ / ಏಡಿ ಸಂಸ್ಕರಣೆ ಹಾಗೂ ಕಪ್ಪೆ ಕಾಲು ರಫ್ತು ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | 476.22 | 626.22 | 12381.60 | 16281.60 |
| 35 | ಆಹಾರ ಸಂಸ್ಕರಣೆ ಮತ್ತು ಆಹಾರ ಪದಾರ್ಥಗಳ ಪ್ಯಾಕಿಂಗ್ (ಸಿದ್ಧ ತಿನಿಸುಗಳು, ಸಿದ್ಧ ಪಾನೀಯ ಹಾಗೂ ಮಸಾಲೆ ಸಹಿತ) ಪ್ರಕ್ರಿಯೆಗಳಲ್ಲಿ ಉದ್ಯೋಗ | 531.23 | 702.44 | 13811.92 | 18263.39 |
| 36 | ಅರಣ್ಯ ಮತ್ತು ಕಟ್ಟಿಗೆ ಡಿಪೋ (ಫಾರೆಸ್ಟ್ರಿ ಮತ್ತು ಟಿಂಬರಿಂಗ್) ಉದ್ದಿಮೆಗಳಲ್ಲಿ ಉದ್ಯೋಗ | 531.58 | 625.17 | 13821.03 | 16254.47 |
| 37 | ಫೌಂಡ್ರಿ (ಯಂತ್ರಗಳ ಸಹಿತ ಅಥವಾ ರಹಿತ ಮೆಷಿನ್ ಶಾಫ್) ಗಳಲ್ಲಿ ಉದ್ಯೋಗ | 451.22 | 577.22 | 11731.60 | 15007.60 |
| 38 | ಗಾಜು ಮತ್ತು ಗಾಜಿನ ಉತ್ಪನ್ನಗಳ ಸಂಸ್ಥೆಗಳಲ್ಲಿ ಉದ್ಯೋಗ | 451.85 | 653.97 | 11748.08 | 17003.22 |
| 39 | ಗ್ರಾನೈಟ್ ಕಲ್ಲುಗಳು ಹಾಗೂ ಮಾರ್ಬಲ್ ಉದ್ದಿಮೆಗಳಲ್ಲಿ ಉದ್ಯೋಗ | 470.89 | 679.10 | 12243.20 | 17656.60 |
| 40 | ಕೈಮಗ್ಗ ಮತ್ತು ವಿದ್ಯುತ್‌ಚಾಲಿತ ಮಗ್ಗ [ಹತ್ತಿ] ಉದ್ದಿಮೆಗಳಲ್ಲಿ ಉದ್ಯೋಗ. | 429.46 | 492.92 | 11166.00 | 12816.00 |

| | | | | | |
|---|---|---|---|---|---|
| 41 | ಆಸ್ಪತ್ರೆಗಳು, ಪ್ರಸವಾಲಯಗಳು (ಮೆಟರ್ನಿಟಿ ಹೋಂಗಳು), ಶುಶ್ರೂಷಾಲಯ (ನರ್ಸಿಂಗ್ ಹೋಂಗಳು) ಕ್ಲಿನಿಕ್, ಹಾಗೂ ವ್ಯಸನ ಮುಕ್ತ ಕೇಂದ್ರಗಳಲ್ಲಿ ಉದ್ಯೋಗ | 447.06 | 738.80 | 11623.67 | 19208.90 |
| 42 | ವಸತಿ ನಿಲಯಗಳು (ಹಾಸ್ಟೆಲ್‌ಗಳು), ಅತಿಥಿ ಗೃಹಗಳು, ಹೋಮ್ ಸ್ಟೇಗಳು, ಪೇಯಿಂಗ್ ಗೆಸ್ಟ್ ಸಂಸ್ಥೆಗಳು, ಸರ್ವೀಸ್ಡ್ ಅಪಾರ್ಟ್‌ಮೆಂಟ್‌ಗಳು, ರೆಸಿಡೆಂಟ್ಸ್ ಅಸೋಸಿಯೇಷನ್, ಮದುವೆ ಹಾಗೂ ಸಮುದಾಯ ಭವನಗಳಲ್ಲಿ ಉದ್ಯೋಗ | 492.73 | 712.69 | 12810.92 | 18529.85 |
| 43 | ಹೋಟೆಲ್ / ವಸತಿ ಸಹಿತ ಹೋಟೆಲ್‌ಗಳು, ರೆಸ್ಟೋರೆಂಟ್ ಮೋಟೆಲ್‌ಗಳು, ಲಾಡ್ಜ್‌ಗಳು, ಡಾಬಾಗಳು, ಕ್ಯಾಂಟೀನ್, ಹೊರಾಂಗಣ ಆಹಾರ ತಯಾರಿಕೆ ಹಾಗೂ ಸರಬರಾಜು (ಕೇಟರಿಂಗ್) ಮತ್ತು ಸಂಬಂಧಪಟ್ಟ ಸಂಸ್ಥೆಗಳಲ್ಲಿ ಉದ್ಯೋಗ | 446.90 | 680.59 | 11619.38 | 17695.34 |
| 44 | ಮಂಜುಗಡ್ಡೆ ಕಾರ್ಖಾನೆ (ಐಸ್ ಫ್ಯಾಕ್ಟರಿ) ಐಸ್ ಕ್ರೀಮ್ ಹಾಗೂ ಶೀತಲ ಸಂರಕ್ಷಣಾ ಸಂಸ್ಥೆಗಳಲ್ಲಿ ಉದ್ಯೋಗ. | 492.73 | 712.69 | 12810.92 | 18529.85 |
| 45 | ಖಂಡಸಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಉದ್ಯೋಗ | 470.89 | 679.10 | 12243.20 | 17656.60 |
| 46 | ಬಟ್ಟೆ ಒಗೆಯುವ, ಡ್ರೈಕ್ಲೀನ್ ಮತ್ತು ಲಾಂಡ್ರಿ ಉದ್ದಿಮೆಗಳ ಕೆಲಸಗಳಲ್ಲಿ ಉದ್ಯೋಗ | 446.90 | 667.28 | 11619.38 | 17349.28 |
| 47 | ಮದ್ಯ ತಯಾರಿಕಾ (ಡಿಸ್ಟಿಲರೀಸ್ ಹಾಗೂ ಬ್ರಿವರೀಸ್), ಬಾಟಲಿಂಗ್ ಹಾಗೂ ಪ್ಯಾಕಿಂಗ್ ಸಹಿತ ಉದ್ದಿಮೆಗಳ ಕೆಲಸಗಳಲ್ಲಿ ಉದ್ಯೋಗ | 492.73 | 702.44 | 12810.92 | 18263.39 |

| | | | | | |
|---|---|---|---|---|---|
| 48 | ಆಯುರ್ವೇದ, ಯೋಗ, ಯುನಾನಿ, ಸಿದ್ಧ ಹೋಮಿಯೋಪತಿ (ಆಯುಷ್) ಹಾಗೂ ಅಲೋಪಥಿಕ್ ಔಷಧಿಗಳ ತಯಾರಿಕೆಯಲ್ಲಿ ಉದ್ಯೋಗ. (ಉತ್ಪಾದನೆ, ವಿತರಣೆ ಜಾಹಿರಾತು ವಿಭಾಗಗಳ ಸಹಿತ) | 492.73 | 673.94 | 12810.92 | 17522.31 |
| 49 | ಅಕ್ಕಿ, ಭತ್ತ, ಜೋಳ ಅಥವಾ ಇನ್ನಿತರ ಧಾನ್ಯಗಳಿಂದ ಮಂಡಕ್ಕಿ, ಅವಲಕ್ಕಿ, ಚುರುಮುರಾ, ಮುರುಮುರಾ ಹಾಗೂ ಇತರೆ ಉತ್ಪನ್ನಗಳನ್ನು ತಯಾರಿಸುವ ಉದ್ದಿಮಗಳ ಕೆಲಸದಲ್ಲಿ ಉದ್ಯೋಗ | 470.89 | 625.17 | 12243.20 | 16254.47 |
| 50 | ಮೆಟಲ್ ರೋಲಿಂಗ್ ಅಂಡ್ ರೀರೋಲಿಂಗ್– [ಫೆರಸ್] ಉದ್ದಿಮೆಗಳಲ್ಲಿ ಉದ್ಯೋಗ | 470.89 | 679.10 | 12243.20 | 17656.60 |
| 51 | ಮೆಟಲ್ ರೋಲಿಂಗ್ ಅಂಡ್ ರೀರೋಲಿಂಗ್ ಉದ್ದಿಮೆಗಳಲ್ಲಿ ಉದ್ಯೋಗ. [ನಾನ್-ಫೆರಸ್] | 470.89 | 679.10 | 12243.20 | 17656.60 |
| 52 | ಲಘು ಸಿಮೆಂಟ್ ಸ್ಥಾವರಗಳಲ್ಲಿ ಉದ್ಯೋಗ. | 492.73 | 695.09 | 12810.92 | 18072.40 |
| 53 | ಮೊಸಾಯಿಕ್ ಹಂಚುಗಳು, ಎಲ್ಲಾ ರೀತಿಯ ನೆಲ ಹಾಸು ಹಂಚುಗಳು, ಹೊಳಪಿನ ಹಂಚುಗಳ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 470.89 | 679.10 | 12243.20 | 17656.60 |
| 54 | ಎಣ್ಣೆ ಮಿಲ್‌ಗಳಲ್ಲಿ ಉದ್ಯೋಗ. | 447.06 | 307.57 | 11623.67 | 7996.92 |
| 55 | ಪೆಟ್ರೋಲ್, ಡೀಸೆಲ್ ಆಯಿಲ್ ಮತ್ತು ಎಲ್.ಪಿ.ಜಿ. ಪಂಪ್‌ಗಳಲ್ಲಿ ಉದ್ಯೋಗ | 470.89 | 679.10 | 12243.20 | 17656.60 |
| 56 | ಪ್ಲಾಸ್ಟಿಕ್, ಪಾಲಿ ಪ್ಲಾಸ್ಟಿಕ್, ರಬ್ಬರ್, ಪಿವಿಸಿ ಪೈಪ್ಸ್ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 447.06 | 702.76 | 11623.67 | 18271.88 |

| | | | | | |
|---|---|---|---|---|---|
| 57 | ಮುದ್ರಣ ಹಾಗೂ ಪ್ರಸರಣಾ ಉದ್ದಿಮೆಗಳಲ್ಲಿ ಉದ್ಯೋಗ | 492.73 | 705.37 | 12810.92 | 18339.52 |
| 58 | ಖಾಸಗಿ ವಿತ್ತ ನಿಗಮಗಳು, (ಫೈನಾನ್ಸ್ ಕಾರ್ಪೋರೇಷನ್) ಚಿಟ್ ಫಂಡ್‌ಗಳು ಹಾಗೂ ಕಾನೂನು ಬದ್ಧ ಬ್ಯಾಂಕಿಂಗ್ ರಹಿತ ನಗದು ವಹಿವಾಟು ಸಂಸ್ಥೆಗಳಲ್ಲಿ ಉದ್ಯೋಗ | 494.38 | 702.76 | 12853.76 | 18271.88 |
| 59 | ಶೌಚಾಲಯಗಳು, ಸ್ನಾನಗೃಹಗಳು, ಒಳಚರಂಡಿಗಳನ್ನು ಶುಚಿ ಮಾಡುವ (Scavenging) ಕೆಲಸಗಳಲ್ಲಿ ಉದ್ಯೋಗ. (ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೊರತುಪಡಿಸಿ). | 610.83 | 660.83 | 15881.60 | 17181.60 |
| 60 | ಹಾಲು ಶೇಖರಣೆ, ಸಂಸ್ಕರಣೆ ಹಾಗೂ ವಿತರಣಾ ಪ್ರಕ್ರಿಯೆಯ ಉದ್ದಿಮೆಗಳಲ್ಲಿ ಉದ್ಯೋಗ | 492.73 | 702.44 | 12810.92 | 18263.39 |
| 61 | ಸಾರ್ವಜನಿಕ ಸಾರಿಗೆ ಸಂಸ್ಥೆಗಳ ಉದ್ದಿಮೆಗಳಲ್ಲಿ ಉದ್ಯೋಗ | 451.22 | 166.60 | 11731.60 | 4331.60 |
| 62 | ಕಾಗದ, ಪಲ್ಪ್ ಕಾಗದ, ರಟ್ಟಿನ ಹಲಗೆ (ಕಾರ್ಡ್‌ಬೋರ್ಡ್), ಹುಲ್ಲಿನ ಹಲಗೆ (ಸ್ಟ್ರಾ ಬೋರ್ಡ್) ಮತ್ತು ನ್ಯೂಸ್ ಪ್ರಿಂಟ್ ಉದ್ದಿಮೆಗಳಲ್ಲಿ ಉದ್ಯೋಗ | 470.89 | 679.10 | 12243.20 | 17656.60 |
| 63 | ಅಕ್ಕಿ, ಧಾನ್ಯಗಳು ಮತ್ತು ಬೇಳೆ ಗಿರಣಿ ಉದ್ದಿಮೆಗಳಲ್ಲಿ ಉದ್ಯೋಗ | 470.89 | 679.10 | 12243.20 | 17656.60 |
| 64 | ರಬ್ಬರ್ ಉತ್ಪನ್ನಗಳು (ಫೋಮ್ ಮತ್ತು ಕಾಯರ್ ರಬ್ಬರ್ ಸಹಿತ) ಉದ್ದಿಮೆಗಳಲ್ಲಿ ಉದ್ಯೋಗ | 470.89 | 679.10 | 12243.20 | 17656.60 |

| | | | | | |
|---|---|---|---|---|---|
| 65 | ಔಷಧಿಗಳು, ಗೃಹಪಯೋಗಿ ವಸ್ತುಗಳ ವೃತ್ತಿಪರ ಪ್ರವರ್ತಕ ಮತ್ತು ಮಾರಾಟದಲ್ಲಿ ಉದ್ಯೋಗ | 447.06 | 702.44 | 11623.67 | 18263.39 |
| 66 | ಭದ್ರತಾ ಏಜೆನ್ಸಿಗಳಲ್ಲಿ ಉದ್ಯೋಗ. (ಕಛೇರಿ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಏಜೆನ್ಸಿಯ ಮೂಲಕ ನಿಯೋಜಿಸಿಕೊಳ್ಳುವ ಎಲ್ಲಾ ಸಂಸ್ಥೆಗಳು ಹಾಗೂ ಉದ್ದಿಮೆಗಳ ಸಹಿತ). | 505.91 | 596.22 | 13153.60 | 15501.60 |
| 67 | ರೇಷ್ಮೆ ಘಟಕಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಉದ್ಯೋಗ ಭಾಗ-1 | 470.89 | 625.17 | 12243.20 | 16254.47 |
| 68 | ರೇಷ್ಮೆ ಘಟಕಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಉದ್ಯೋಗ ಭಾಗ-2 | 551.74 | 679.10 | 14345.30 | 17656.60 |
| 69 | ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಉದ್ಯೋಗ | 470.89 | 679.10 | 12243.20 | 17656.60 |
| 70 | ಸ್ಪಿನ್ನಿಂಗ್ ಮಿಲ್ ಉದ್ದಿಮೆಗಳಲ್ಲಿ ಉದ್ಯೋಗ | 421.10 | 458.19 | 10948.62 | 11913.03 |
| 71 | ಸ್ಟನ್ ಪೈಪುಗಳು, ಕಾಂಕ್ರೀಟ್ ಪೈಪುಗಳು, ಸಾನಿಟರಿ ಫಿಟ್ಟಿಂಗ್‌ಗಳು, ಪ್ಲೈನ್ ಸಿಮೆಂಟ್ ಕಾಂಕ್ರೀಟ್ (ಪಿ.ಸಿ.ಸಿ.) ಹಾಗೂ ರೀ-ಇನ್‌ಪೋರ್ಸ್‌ಡ್ ಸಿಮೆಂಟ್ ಕಾಂಕ್ರೀಟ್ (ಆರ್.ಸಿ.ಸಿ). ಪೈಪುಗಳು ಮತ್ತು ಕಂಬಗಳ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 447.06 | 680.59 | 11623.67 | 17695.34 |
| 72 | ಲೋಹದ ಅಲ್ಮೇರಾಗಳು, ಕುರ್ಚಿಗಳು, ಮೇಜುಗಳು ಹಾಗೂ ಇತರೆ ಪೀಠೋಪಕರಣಗಳನ್ನು ಉತ್ಪಾದಿಸುವ ಉದ್ದಿಮೆಗಳಲ್ಲಿ ಉದ್ಯೋಗ | 446.90 | 680.59 | 11619.38 | 17695.34 |

| | | | | | |
|---|---|---|---|---|---|
| 73 | ಕಲ್ಲು ಒಡೆಯುವುದು ಮತ್ತು ಕಲ್ಲು ಪುಡಿ ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | 470.89 | 625.17 | 12243.20 | 16254.47 |
| 74 | ಚರ್ಮ ಹದ ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | ಅನುಸೂಚಿಯಿಂದ ಕೈ ಬಿಡಲಾಗಿದೆ | | | |
| 75 | ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ | 409.24 | 479.39 | 10640.34 | 12464.01 |
| 76 | ರೇಷ್ಮೆ ಬಟ್ಟೆಗಳ (ಸಿಲ್ಕ್) ಉದ್ದಿಮೆಗಳಲ್ಲಿ ಉದ್ಯೋಗ | 488.41 | 595.10 | 12698.62 | 15472.59 |
| 77 | ಹೆಂಚು ತಯಾರಿಕೆ ಉದ್ದಿಮೆಗಳಲ್ಲಿ ಉದ್ಯೋಗ | 470.89 | 625.17 | 12243.20 | 16254.47 |
| 78 | ಶೇಂದಿ ಇಳಿಸುವ ಉದ್ದಿಮೆಗಳಲ್ಲಿ ಉದ್ಯೋಗ | 470.89 | 625.17 | 12243.20 | 16254.47 |
| 79 | ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಉದ್ಯೋಗ | 486.22 | 663.91 | 12641.60 | 17261.60 |
| 80 | ಸಹಕಾರ ಸೊಸೈಟಿಗಳಲ್ಲಿ ಉದ್ಯೋಗ | 551.74 | 679.10 | 14345.30 | 17656.60 |
| 81 | ಚಿನ್ನ ಮತ್ತು ಬೆಳ್ಳಿ ಆಭರಣಗಳ ತಯಾರಿಕೆ ಮತ್ತು ಹರಳುಗಳು, ವಜ್ರಗಳನ್ನು ಕತ್ತರಿಸುವುದು, ಹೊಳಪು ಗೊಳಿಸುವ ಉದ್ದಿಮೆಗಳಲ್ಲಿ ಉದ್ಯೋಗ | 509.39 | 679.10 | 13244.20 | 17656.60 |
| 82 | ಬಟ್ಟೆಗಳಿಗೆ ಬಣ್ಣ ಹಾಕುವ (ಡೈ) ಮತ್ತು ಅಚ್ಚು ಹಾಕುವ (ಪ್ರಿಂಟ್) ಹಾಕುವ ಉದ್ದಿಮೆಗಳಲ್ಲಿ ಉದ್ಯೋಗ | 432.93 | 508.88 | 11256.24 | 13230.86 |

| | | |
|---|---|---|
| 83 | ಸರಕು ಸಾಮಗ್ರಿಗಳ ಹೇರುವ ಮತ್ತು ಇಳಿಸುವ (ಲೋಡಿಂಗ್ ಮತ್ತು ಅನ್‌ಲೋಡಿಂಗ್) ಕೆಲಸಗಳಲ್ಲಿ ಉದ್ಯೋಗ | ತುಂಡು ಆಧಾರ |

ಅನುಬಂಧ-02

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 105 ಎಲ್‌ಡಬ್ಲ್ಯೂಎ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 01.09.2022

## ಸುತ್ತೋಲೆ

ವಿಷಯ: ವಿವಿಧ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ನೇಮಕಗೊಂಡ ಸಿಬ್ಬಂದಿಗಳಿಗೆ ಕನಿಷ್ಠ ವೇತನ ನೀಡುವ ಬಗ್ಗೆ.

ಉಲ್ಲೇಖ: ಕಾರ್ಮಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಕಾಇ 51 ಎಲ್ ಡಬ್ಲ್ಯೂ ಎ 2017, ದಿನಾಂಕ: 29.12.2017.

*********

ಸರ್ಕಾರದ ವಿವಿಧ ಇಲಾಖೆಗಳು, ಸರ್ಕಾರಿ ಸ್ವಾಮ್ಯದ ನಿಗಮಗಳು, ಮಂಡಳಿಗಳು, ವಿಶ್ವವಿದ್ಯಾಲಯಗಳು, ಮಹಾವಿದ್ಯಾಲಯಗಳು, ಶಾಲೆಗಳು, ಸ್ಥಳೀಯ ಸಂಸ್ಥೆಗಳು, ಶಾಸನಬದ್ಧ ಸಂಸ್ಥೆಗಳು, ಸೊಸೈಟಿಗಳು, ಪರಿಷತ್ತುಗಳು, ಯಾವುದೇ ರೀತಿಯ ರಾಜ್ಯ ಸರ್ಕಾರದ ಅಧೀನ / ಸ್ವಾಯತ್ತ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ನೇಮಕಗೊಂಡು ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಪಾವತಿಸಬೇಕಾದ ಕನಿಷ್ಠ ವೇತನ, ದುಡಿಮೆಯ ಗಂಟೆಗಳು, ರಜಾ ದಿನಗಳು, ಇ.ಎಸ್.ಐ/ ಪಿ.ಎಫ್ ಕಟಾವಣೆ ಬಗ್ಗೆ ಹಾಗೂ ಮಾನವ ಸಂಪನ್ಮೂಲ ಪೂರೈಸುವ ಗುತ್ತಿಗೆದಾರರು ನಿರ್ವಹಿಸುವ ಅಂಶಗಳ ಬಗ್ಗೆ ಸೂಕ್ತ ಮಾರ್ಗದರ್ಶನವನ್ನು ಉಲ್ಲೇಖಿತ ಸುತ್ತೋಲೆಯಲ್ಲಿ ನೀಡಲಾಗಿತ್ತು. ಸದರಿ ಸುತ್ತೋಲೆಯ ಕ್ರ.ಸಂ. 1, 2 ಹಾಗೂ 3 ರಲ್ಲಿ ಕ್ರಮವಾಗಿ "ಭದ್ರತಾ ಏಜೆನ್ಸಿಗಳಲ್ಲಿ ಉದ್ಯೋಗ (ಕಛೇರಿ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಏಜೆನ್ಸಿಯ ಮೂಲಕ ನಿಯೋಜಿಸಿಕೊಳ್ಳುವ ಎಲ್ಲಾ ಸಂಸ್ಥೆಗಳು ಹಾಗೂ ಉದ್ದಿಮೆಗಳ ಸಹಿತ)", "ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಉದ್ಯೋಗ", ಶೌಚಾಲಯಗಳು, ಸ್ನಾನಗೃಹಗಳು, ಒಳಚರಂಡಿಗಳನ್ನು ಶುಚಿ ಮಾಡುವ (Scavenging) ಕೆಲಸಗಳಲ್ಲಿ ಉದ್ಯೋಗ (ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೊರತುಪಡಿಸಿ)" ಅನುಸೂಚಿತ ಉದ್ದಿಮೆಗಳಿಗೆ ಸಂಬಂಧಿಸಿದಂತೆ 2016ನೇ ಸಾಲಿನಲ್ಲಿ ಹೊರಡಿಸಲಾಗಿದ್ದ ಅಧಿಸೂಚನೆಗಳಲ್ಲಿನ ದರಗಳನ್ನು ಅನ್ವಯಿಸಿಕೊಂಡು ಕನಿಷ್ಠ ವೇತನ ಪಾವತಿಸುವಂತೆ ತಿಳಿಸಲಾಗಿರುತ್ತದೆ.

ಸದರಿ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ ಅಧಿಸೂಚನೆಗಳನ್ನು ಹೊರಡಿಸಿರುವ ಹಿನ್ನೆಲೆಯಲ್ಲಿ, ಪ್ರಸ್ತುತ ಹೊರಗುತ್ತಿಗೆ ಆಧಾರದಲ್ಲಿ ನೇಮಕಗೊಂಡು ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಈ ಕೆಳಕಂಡಂತೆ ಕನಿಷ್ಠ ವೇತನ ದರಗಳನ್ನು ಅನ್ವಯಿಸಿಕೊಳ್ಳಲು ಸುತ್ತೋಲೆಯನ್ನು ಹೊರಡಿಸಲಾಗಿದೆ.

1. ಹೊರಗುತ್ತಿಗೆ ಸಿಬ್ಬಂದಿಗಳನ್ನು ಭದ್ರತಾ ಏಜೆನ್ಸಿ ಮುಖಾಂತರ ನೇಮಿಸಿಕೊಂಡಿದ್ದಲ್ಲಿ, "ಭದ್ರತಾ ಏಜೆನ್ಸಿಗಳಲ್ಲಿ ಉದ್ಯೋಗ (ಕಛೇರಿ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಏಜೆನ್ಸಿಯ

ಸಂಸ್ಥೆಗಳು ಹಾಗೂ ಉದ್ದಿಮೆಗಳ ಸಹಿತ)", ಅನುಸೂಚಿತ
ಮೂಲಕ ನಿಯೋಜಿಸಿಕೊಳ್ಳುವ ಎಲ್ಲಾ ಉದ್ದಿಮೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 18 ಎಲ್‌ಡಬ್ಲ್ಯೂಎ 2022, ದಿನಾಂಕ: 28.07.2022ರಲ್ಲಿ ನಿಗದಿಪಡಿಸಿರುವ ಕನಿಷ್ಠ ವೇತನ ದರಗಳನ್ನು ಪಾವತಿಸತಕ್ಕದ್ದು.

2. ಇತರೆ ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಹೊರಗುತ್ತಿಗೆ ಸಿಬ್ಬಂದಿಗಳನ್ನು ನೇಮಿಸಿಕೊಂಡಲ್ಲಿ, "ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳು" ಅನುಸೂಚಿತ ಉದ್ದಿಮೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 106 ಎಲ್‌ಡಬ್ಲ್ಯೂಎ 2021, ದಿನಾಂಕ: 28.07.2022ರಲ್ಲಿ ನಿಗದಿಪಡಿಸಿರುವ ಕನಿಷ್ಠ ದರಗಳನ್ನು ಪಾವತಿಸತಕ್ಕದ್ದು.

3. ಶೌಚಾಲಯಗಳು, ಸ್ನಾನಗೃಹಗಳು, ಒಳಚರಂಡಿಗಳನ್ನು ಶುಚಿ ಮಾಡುವ (Scavenging) ಕೆಲಸಗಳಲ್ಲಿ ಉದ್ಯೋಗ (ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೊರತುಪಡಿಸಿ)" ಅನುಸೂಚಿತ ಉದ್ದಿಮೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 105 ಎಲ್ ಡಬ್ಲ್ಯೂಎ 2021 ದಿನಾಂಕ: 28.07.2022ರಲ್ಲಿ ನಿಗದಿಪಡಿಸಿರುವ ಕನಿಷ್ಠ ವೇತನ ದರಗಳನ್ನು ಪಾವತಿಸತಕ್ಕದ್ದು.

4. ಕಾರ್ಮಿಕರ ಕೆಲಸದ ಸ್ವರೂಪದ ಬಗ್ಗೆ ಸ್ಪಷ್ಟತೆ ಇರದಿದ್ದಲ್ಲಿ, ಈ ಬಗ್ಗೆ ಸ್ಪಷ್ಟವಾಗಿ ನಿರ್ಣಯಕ್ಕೆ ಬರಲು ಆಯಾ ಇಲಾಖೆಗಳ ಹಂತದಲ್ಲಿ ಅಧಿಸೂಚನೆಯಲ್ಲಿ ನಮೂದಾಗಿರುವ ಕೆಲಸದ ಸ್ವರೂಪಗಳಿಗೆ ಸಮಾನವಾಗಿವೆಯೋ ಎಂಬುದನ್ನು ಅಧ್ಯಯನ ಮಾಡಿ, ನಿರ್ಣಯಕ್ಕೆ ಬಂದು ಆಯಾ ಸ್ವರೂಪದ ಕೆಲಸಗಳಿಗೆ ವೇತನ ಅನ್ವಯಿಸಿಕೊಳ್ಳಬಹುದಾಗಿರುತ್ತದೆ.

5. ಪ್ರತಿ ವರ್ಷ ಏಪ್ರಿಲ್ ಮಾಹೆಯಲ್ಲಿ ಏರಿಕೆಯಾಗುವ ವ್ಯತ್ಯಸ್ಥ ತುಟ್ಟಿಭತ್ಯೆ ದರಗಳನ್ನು ಸೇರಿಸಿ ಪಾವತಿಸತಕ್ಕದ್ದು.

6. ವಿರಾಮವು ಒಳಗೊಂಡಂತೆ ಒಂದು ದಿನಕ್ಕೆ ಎಂಟು ಘಂಟೆಗಳ ಕೆಲಸಕ್ಕಾಗಿ ಕನಿಷ್ಠ ವೇತನವಿದ್ದು, ಎಂಟು ತಾಸಿಗಿಂತಲೂ ಹೆಚ್ಚಿನ ಕೆಲಸಕ್ಕಾಗಿ ಹೆಚ್ಚುವರಿ ಭತ್ಯೆಯನ್ನು ಘಂಟೆಯು ಹೆಚ್ಚಾದಂತೆ ದ್ವಿಗುಣ ದರದಲ್ಲಿ ನೀಡುವುದು. ವೇತನವನ್ನು ಲೆಕ್ಕ ಹಾಕುವಾಗ, ಮಾಹೆಯ 4 ರಜಾದಿನಗಳನ್ನೂ ಕೂಡ ಪರಿಗಣಿಸತಕ್ಕದ್ದು.

ತಿಂಗಳ ವೇತನ = ದಿನದ ವೇತನ = ಘಂಟೆಯ ವೇತನ

26 ದಿನಗಳು 8 ತಾಸು

7. ಒಂದು ದಿನದ ಕೆಲಸ ಎಂದರೆ ಎಂಟು (8) ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು ಎಂಟು (8) ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಥವಾ ಕಾರ್ಮಿಕರು ಕೆಲಸ ನಿರ್ವಹಿಸಿದ್ದಲ್ಲಿ, ಅಂತಹ ಕಡಿಮೆ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನವನ್ನು ಕರ್ನಾಟಕ ಕನಿಷ್ಠ ವೇತನ ನಿಯಮಗಳು, 1958ರ ನಿಯಮ 27 ರನ್ವಯ ಆ ಕೆಲಸದ ವರ್ಗಕ್ಕೆ ನಿಗದಿಪಡಿಸಿರುವ ದಿನವೊಂದರ ಕನಿಷ್ಠ ವೇತನವನ್ನು ಗಂಟೆಗಳ ಕನಿಷ್ಠ ವೇತನವನ್ನಾಗಿ ಲೆಕ್ಕ ಹಾಕಿ, ಸಂಬಂಧಿಸಿದ ಕಾರ್ಮಿಕರಿಗೆ ಉದ್ಯೋಗದಾತರು ಪಾವತಿಸತಕ್ಕದ್ದು.

8. ಒಂದು ತಿಂಗಳಿನ ನಾಲ್ಕು ರಜಾ ದಿವಸಗಳಲ್ಲಿ ಕಾರ್ಮಿಕನು ಕೆಲಸ ಮಾಡಲು ಇಚ್ಛಿಸಿದಲ್ಲಿ ದ್ವಿಗುಣ ದಿನಭತ್ಯೆ ದರವನ್ನು ಹೆಚ್ಚಿನ ಭತ್ಯೆಯನ್ನಾಗಿ ಪ್ರತಿ ದಿನಕ್ಕೆ ಅವನು/ಅವಳು ಪಡೆಯುತ್ತಾರೆ.

9. ನೌಕರರ ಭಾಗದ ಇ.ಎಸ್.ಐ/ ಪಿ.ಎಫ್ ವಂತಿಗೆಗೆ ಸೇರಿಸಿ, ಮಾಲೀಕರು ಮಾಲೀಕರ ಭಾಗದ ಇ.ಎಸ್.ಐ./ಪಿ.ಎಫ್. ವಂತಿಗೆ ಹಣವನ್ನು ನೌಕರರ ಇ.ಎಸ್.ಐ / ಪಿ.ಎಫ್ ಖಾತೆಗೆ ಜಮಾ ಮಾಡತಕ್ಕದ್ದು.

10. ಮಾನವ ಸಂಪನ್ಮೂಲ ಪೂರೈಸುವ ಗುತ್ತಿಗೆದಾರ ಸಂಸ್ಥೆಗಳ ಮೇಲೆ ಮೂಲ ಗುತ್ತಿಗೆದಾರರು ಈ ಕೆಳಕಂಡ ಅಂಶಗಳ ಬಗ್ಗೆ ನಿಗಾ ವಹಿಸತಕ್ಕದ್ದು:-

ಅ) ಮೇಲಿನ ನಿಯಮಗಳಂತೆ, ವೇತನವನ್ನು ಪಾವತಿಸತಕ್ಕದ್ದು.

ಆ) ಪ್ರತಿ ತಿಂಗಳು 5ನೇ ದಿನಾಂಕದೊಳಗೆ ನೌಕರರ ಬ್ಯಾಂಕ್ ಖಾತೆಗೆ ವೇತನದ ಹಣವನ್ನು ಜಮಾ ಮಾಡತಕ್ಕದ್ದು.

ಇ) ಕ್ರಮಬದ್ಧವಲ್ಲದ ಯಾವುದೇ ಕಟಾವಣೆಗಳನ್ನು ಮಾಡಕೂಡದು.

ಈ) ನೌಕರರ ಇ.ಎಸ್.ಐ /ಪಿ.ಎಫ್ ನೊಂದಾಯಿಸಿದ ನೋಂದಾವಣೆ ಸಂಖ್ಯೆಗಳಿಗೆ ಅನುಗುಣವಾಗಿ ಇ.ಎಸ್‌ಐ / ಪಿ.ಎಫ್ ವಂತಿಗೆ ಹಣವನ್ನು ಗುತ್ತಿಗೆದಾರ ಕಟಾಯಿಸಿ, ನಿರ್ವಹಿಸಿರುವ ದಾಖಲೆ ಪ್ರಸ್ತುತ ಅವಧಿಗಳಿಗೆ ಸಂಬಂಧಿಸಿರುವುದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

11. ನೌಕರರ ಹಾಜರಾತಿಯನ್ನು ಆಧಾರ ಸಂಖ್ಯೆಗೆ ಜೋಡಣೆಯಾಗಿರುವ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ (AEBAS)ಯ ಮುಖಾಂತರ ನಿರ್ವಹಿಸತಕ್ಕದ್ದು ಹಾಗೂ (AEBAS) ವ್ಯವಸ್ಥೆಯ ಮೂಲಕ ಹಾಜರಾತಿಯನ್ನು ನಿರ್ವಹಿಸಲಾಗದ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸುವ ನೌಕರರ ಹಾಜರಾತಿಯನ್ನು ಸೂಕ್ತ ವ್ಯವಸ್ಥೆಯ ಮೂಲಕ ನಿರ್ವಹಿಸತಕ್ಕದ್ದು.

12. ಕನಿಷ್ಠ ವೇತನ ದರಗಳು ಶಾಸನಬದ್ಧ ಪರಿಮಿತಿಯಾಗಿರುವುದರಿಂದ, ಕನಿಷ್ಠ ವೇತನ ದರಗಳನ್ನು ನಮೂದಿಸದೆ ಟೆಂಡರ್ ದಾಖಲೆಯಲ್ಲಿ ಕೇವಲ "ಸೇವಾ ಶುಲ್ಕವನ್ನು" ಮಾತ್ರ ನಮೂದಿಸುವ ಅವಕಾಶವನ್ನು ಮಾನವ ಸಂಪನ್ಮೂಲ ಪೂರೈಕೆ ಸಂಸ್ಥೆಗಳಿಗೆ ಕಲ್ಪಿಸುವ ಷರತ್ತಿನೊಂದಿಗೆ ಟೆಂಡರ್‌ನ್ನು ಪ್ರಕಟಿಸತಕ್ಕದ್ದು.

ಟೆಂಡರ್‌ನಲ್ಲಿ ಭಾಗವಹಿಸುವ ಎಲ್ಲಾ ಮಾನವ ಸಂಪನ್ಮೂಲ ಪೂರೈಕೆ ಸಂಸ್ಥೆಗಳ ಪೂರ್ವಾಪರಗಳನ್ನು ಪರಿಶೀಲಿಸಿ,

(ಅ) ಸದರಿ ಸಂಸ್ಥೆಗಳು ಈ ಹಿಂದೆ ನೌಕರರ ಇ.ಎಸ್.ಐ ಮತ್ತು ಪಿ.ಎಫ್ ವಂತಿಗೆಯನ್ನು ಸರಿಯಾಗಿ ಪಾವತಿಸಿರುವ ಕುರಿತು ಹಿಂದಿನ ಕೆಲವು ವರ್ಷಗಳ ದಾಖಲೆಗಳನ್ನು ಪರಿಶೀಲಿಸಬೇಕು.

(ಆ) ಇತರೆ ಅನ್ವಯವಾಗುವ ಕಾರ್ಮಿಕ ಕಾನೂನುಗಳನ್ನು ಪಾಲಿಸಿವೆಯೇ ಎಂಬುದನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕು.

(ಇ) ಸದರಿ ಗುತ್ತಿಗೆದಾರರು ಈ ಹಿಂದೆ ಯಾವುದೇ ಸಕ್ಷಮ ನ್ಯಾಯಾಲಯದಿಂದ ಕಾರ್ಮಿಕ ಕಾನೂನಿನ ಉಲ್ಲಂಘನೆಗಾಗಿ ದಂಡನೆಗೊಳಗಾಗಿಲ್ಲದಿರುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು. ಟೆಂಡರ್ ದಾಖಲೆಗಳಲ್ಲಿ ಮೇಲ್ಕಂಡ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಅಳವಡಿಸಿಕೊಂಡು ಟೆಂಡರ್ ದಾಖಲೆಯನ್ನು ಪ್ರಕಟಿಸತಕ್ಕದ್ದು.

ಆದಾಗ್ಯೂ ಸಹ ಅನೇಕ ಸರ್ಕಾರಿ ಇಲಾಖೆಗಳು, ಸಂಘ-ಸಂಸ್ಥೆಗಳು, ಸರ್ಕಾರಿ ಸ್ವಾಮ್ಯದ ಅಂಗ-ಸಂಸ್ಥೆಗಳು ಈ ಸುತ್ತೋಲೆಯಲ್ಲಿನ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸದೇ ಇರುವುದು, ನಿಗದಿಪಡಿಸಿರುವ ಕನಿಷ್ಠ ವೇತನಗಳನ್ನು ಪ್ರತಿ ತಿಂಗಳು ಪಾವತಿಸುತ್ತಿಲ್ಲದೆ ಇರುವುದು ಹಾಗೂ ನೌಕರರ ವೇತನದಿಂದ ಕಟಾಯಿಸಿದ

..4

ಪಿ.ಎಫ್, ಇ.ಎಸ್.ಐ ವಂತಿಗೆಗೆ ಮಾಲೀಕರ ಭಾಗದ ವಂತಿಗೆಯನ್ನು ಸೇರಿಸಿ ಇ.ಎಸ್.ಐ. ಪಿ.ಎಫ್ ಖಾತೆಗೆ ಜಮಾ ಮಾಡುತ್ತಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಲ್ಲಿ, ಸರ್ಕಾರವು ಇಂತಹ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸುವುದೆಂದು ಈ ಮೂಲಕ ತಿಳಿಸಲಾಗಿದೆ.

(ಸಂಧ್ಯಾ ಎಲ್. ನಾಯಕ್)
ಸರ್ಕಾರದ ಉಪ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಈ ಸುತ್ತೋಲೆಯನ್ನು ಇ-ರಾಜ್ಯಪತ್ರ (E-Gazette)ದಲ್ಲಿ ಪ್ರಕಟಿಸಲು ಕೋರಲಾಗಿದೆ.

1. ಮಹಾಲೇಖಪಾಲರು, ಲೆಕ್ಕಪತ್ರ/ಲೆಕ್ಕ ಪರಿಶೋಧನೆ, ಕರ್ನಾಟಕ, ಬೆಂಗಳೂರು.
2. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.
3. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು (ಕಾರ್ಮಿಕ ಆಯುಕ್ತರ ಮೂಲಕ)
4. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, (ಕಾರ್ಮಿಕ ಆಯುಕ್ತರ ಮೂಲಕ)
5. ಎಲ್ಲಾ ಜಿಲ್ಲೆಗಳ ವಿಭಾಗಾಧಿಕಾರಿಗಳು (ಕಾರ್ಮಿಕ ಆಯುಕ್ತರ ಮೂಲಕ)

ಪ್ರತಿಗಳು:

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ /ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಶಾಖೆ, ವಿಕಾಸಸೌಧ, ಬೆಂಗಳೂರು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 963 ಕ್ಕೆ ಅನುಬಂಧ-3

| ಕರ್ನಾಟಕ ರಾಜ್ಯದಲ್ಲಿರುವ ಅನುಸೂಚಿತ ಉದ್ದಿಮೆಗಳ ವಿವರಗಳು<br>ಕಲಂ -2 (ಜಿ) ಸಹವಾಚಿತ ಕಲಂ-27 (ಭಾಗ-1) | |
|---|---|
| ಕ್ರಸಂ | ಅನುಸೂಚಿತ ಉದ್ದಿಮೆಗಳ ಹೆಸರು |
| 1 | ಲಘು ಪಾನೀಯ ಸೋಡಾ ಸಹಿತ ಎಲ್ಲಾ ಇಂಗಾಲಾಮ್ಲಿತ ಪಾನೀಯ, ಮಿನರಲ್ (ಖನಿಜ) ನೀರು ಮತ್ತು ಜ್ಯೂಸ್ (ಹಣ್ಣಿನ ರಸ) ಉತ್ಪಾದನೆ ಹಾಗೂ ಸಂಬಂಧಪಟ್ಟ ಪ್ರಕ್ರಿಯೆಗಳಲ್ಲಿ ಉದ್ಯೋಗ. |
| 2 | ಅಗರಬತ್ತಿ ತಯಾರಿಕೆ ಮತ್ತು ಸಾಂಬ್ರಾಣಿ (ಇನ್‌ಸೆನ್ಸ್) ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗ |
| 3 | ಅಡಿಕೆ (ಸುಪಾರಿ) ಉದ್ದಿಮೆಗಳಲ್ಲಿ ಉದ್ಯೋಗ |
| 4 | ಸ್ವಯಂಯಾನ ಯಂತ್ರ ಶಾಸ್ತ್ರ (ಆಟೋಮೊಬೈಲ್ ಇಂಜನಿಯರಿಂಗ್) (ಉತ್ಪಾದನೆ, ಅಸೆಂಬ್ಲಿಂಗ್, ಬಾಡಿ ಬಿಲ್ಡಿಂಗ್, ಸರ್ವೀಸಿಂಗ್ ಮತ್ತು ರಿಪೇರಿ ಕೆಲಸಗಳ ಸಹಿತ) |
| 5 | ಬೇಕರಿ ಉದ್ದಿಮೆ ಮತ್ತು ಬೇಕಿಂಗ್ ಪ್ರಕ್ರಿಯೆಗಳಲ್ಲಿ ಉದ್ಯೋಗ. |
| 6 | ಬೀಡಿ ತಯಾರಿಕೆ ಪ್ರಕ್ರಿಯೆಯಲ್ಲಿ ಉದ್ಯೋಗ. |
| 7 | ತಂಬಾಕು ಸಂಸ್ಕರಣಾ ಉದ್ದಿಮೆಗಳಲ್ಲಿ ಉದ್ಯೋಗ |
| 8 | ಬಿಸ್ಕತ್ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ |
| 9 | ಹಿತ್ತಾಳೆ, ತಾಮ್ರ, ಅಲ್ಯೂಮಿನಿಯಂ, ಉಕ್ಕು (ಸ್ಟೀಲ್), ಹಿಂಡಾಲಿಯಮ್ ಪಾತ್ರೆಗಳು ಮತ್ತು ಇತರೆ ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗ. |
| 10 | ಇಟ್ಟಿಗೆ ತಯಾರಿಕೆ ಹಾಗೂ ಪೂರ್ವ ಒತ್ತಡ (ಪ್ರೀ- ಸ್ಟ್ರೆಸ್ಡ್) ದೊಂದಿಗೆ ತಯಾರಿಸಿದ ಉತ್ಪನ್ನಗಳ ತಯಾರಿಕೆಯ ಉದ್ದಿಮೆಗಳಲ್ಲಿ ಉದ್ಯೋಗ. |
| 11 | ಮರದ ಕೆಲಸ [ಕಾರ್ಪೆಂಟರಿ] ಹಾಗೂ ಮರ ಕೊಯ್ಯುವ [ಸಾಮಿಲ್] ಸಂಸ್ಥೆಗಳಲ್ಲಿ ಉದ್ಯೋಗ. |
| 12 | ಬೆಂಕಿ ಪೊಟ್ಟಣ ತಯಾರಿಕೆ ಉದ್ದಿಮೆಗಳಲ್ಲಿ ಉದ್ಯೋಗ. |
| 13 | ಪ್ಲೈವುಡ್ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ. |
| 14 | ಮರದ ದಿಮ್ಮಿಗಳ ಘಟಕಗಳಲ್ಲಿ ಉದ್ಯೋಗ. |
| 15 | ವಿನೀರ್ ಉದ್ದಿಮೆಗಳಲ್ಲಿ ಉದ್ಯೋಗ |
| 16 | ಏಲಕ್ಕಿ ಮಲ್ಲೈಗಳು ಮತ್ತು ಏಲಕ್ಕಿ ತೋಟಗಳಲ್ಲಿ ಉದ್ಯೋಗ |
| 17 | ಗೋಡಂಬಿ ಸಂಸ್ಕರಣಾ ಉದ್ದಿಮೆಗಳಲ್ಲಿ ಉದ್ಯೋಗ. |
| 18 | ಜೇಡಿ ಮಣ್ಣಿನ ಮಡಿಕೆಗಳು, ಸಿರಾಮಿಕ್ಸ್ ಸ್ಟೋನ್ ವೇರ್ ಮತ್ತು ಇತರೆ ಉತ್ಪನ್ನಗಳ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ. |
| 19 | ಸಿಂಕೋನಾ, ರಬ್ಬರ್, ಟೀ & ಕಾಫೀ ತೋಟಗಳಲ್ಲಿ ಉದ್ಯೋಗ (ಕಛೇರಿ ಸಿಬ್ಬಂದಿಗಳನ್ನು ಹೊರತುಪಡಿಸಿ) |
| 20 | ಸಿಂಕೋನಾ, ರಬ್ಬರ್, ಟೀ & ಕಾಫೀ ತೋಟಗಳಲ್ಲಿ ಉದ್ಯೋಗ (ಕಛೇರಿ ಸಿಬ್ಬಂದಿಗಳು) |
| 21 | ರಾಸಾಯನಿಕ ರಸಗೊಬ್ಬರ, ಕೀಟ ನಾಶಕ, ಕ್ರಿಮಿನಾಶಕ ಉತ್ಪಾದನಾ ಉದ್ದಿಮೆಯ ಕೆಲಸಗಳಲ್ಲಿ ಯೋಜನೆ. |
| 22 | ಕ್ಲಬ್‌ಗಳಲ್ಲಿ ಉದ್ಯೋಗ |
| 23 | ಕಾಫಿ ಕ್ಯೂರಿಂಗ್ ಸಂಸ್ಥೆಗಳಲ್ಲಿ ಉದ್ಯೋಗ. |
| 24 | ಮಿಠಾಯಿ ತಯಾರಿಸುವ (ಕನ್‌ಫೆಕ್ಷನರಿ) ಉದ್ದಿಮೆಗಳಲ್ಲಿ ಉದ್ಯೋಗ. |

| | |
|---|---|
| 25 | ಹತ್ತಿ ಹೆಕ್ಕುವ, ಅಮುಕುವ ಮತ್ತು ಸಂಬಂಧಪಟ್ಟ ಪ್ರಕ್ರಿಯೆಗಳ ಕೆಲಸಗಳಲ್ಲಿ ಉದ್ಯೋಗ. |
| 26 | ಕಟ್ಟಡ ಮತ್ತು ಇತರ ನಿರ್ಮಾಣ ಕಾಮಗಾರಿಗಳಲ್ಲಿ ಉದ್ಯೋಗ. |
| 27 | ಗೃಹಕೃತ್ಯ ಸಹಾಯಕರು, ಮಕ್ಕಳ ಪೋಷಣಾ ಸಹಾಯಕರು, ಹೋಮ್ ನರ್ಸ್‌ಗಳ ಸಹಿತ ವಾಸದ ಮನೆಗಳಲ್ಲಿ ಗೃಹ ಕೆಲಸಗಳ ಉದ್ಯೋಗ. |
| 28 | ಎಲೆಕ್ಟ್ರಾನಿಕ್ಸ್ ಉದ್ದಿಮೆಗಳಲ್ಲಿ ಉದ್ಯೋಗ. |
| 29 | ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರೋಪ್ಲೇಟಿಂಗ್ ಉದ್ದಿಮೆಗಳಲ್ಲಿ ಉದ್ಯೋಗ. |
| 30 | ಅನುಸೂಚಿತ ಪಟ್ಟಿಗೆ ಸೇರದ ಉದ್ದಿಮೆಯ ಕೆಲಸದಲ್ಲಿ ಉದ್ಯೋಗ. ಕರ್ನಾಟಕ ರಾಜ್ಯ ತಳ ಹಂತದ ಕನಿಷ್ಠ ವೇತನ. |
| 31 | ಇಂಜಿನಿಯರಿಂಗ್, ಫ್ಯಾಬ್ರಿಕೇಷನ್ ಹಾಗೂ ಸಂಬಂಧಪಟ್ಟ ಉದ್ದಿಮೆಯ ಕೆಲಸಗಳಲ್ಲಿ ಉದ್ಯೋಗ. |
| 32 | ಚಲನಚಿತ್ರ (ಸಿನಿಮಾ / ಕಿರು ಚಿತ್ರ) ಉದ್ದಿಮೆಗಳ ನಿರ್ಮಾಣ, ವಿತರಣೆ, ಜಾಹಿರಾತು ಹಾಗೂ ಸಂಬಂಧಪಟ್ಟ ಕೆಲಸಗಳಲ್ಲಿ ಉದ್ಯೋಗ. |
| 33 | ಮೀನು ಹಿಡಿಯುವುದು, ಮೀನು ಸಂಸ್ಕರಣೆ, ಮೀನು ಪೀಲಿಂಗ್, ಸೀಗಡಿ / ಏಡಿ ಸಂಸ್ಕರಣೆ ಹಾಗೂ ಕಪ್ಪೆ ಕಾಲು ರಫ್ತು ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ. |
| 34 | ಆಹಾರ ಸಂಸ್ಕರಣೆ ಮತ್ತು ಆಹಾರ ಪದಾರ್ಥಗಳ ಪ್ಯಾಕಿಂಗ್ (ಸಿದ್ಧ ತಿನಿಸುಗಳು, ಸಿದ್ಧ ಪಾನೀಯ ಹಾಗೂ ಮಸಾಲೆ ಸಹಿತ) ಪ್ರಕ್ರಿಯೆಗಳಲ್ಲಿ ಉದ್ಯೋಗ. |
| 35 | ಅರಣ್ಯ ಮತ್ತು ಕಟ್ಟಿಗೆ ಡಿಪೋ (ಫಾರೆಸ್ಟ್ರಿ ಮತ್ತು ಟಿಂಬರಿಂಗ್) ಉದ್ದಿಮೆಗಳಲ್ಲಿ ಉದ್ಯೋಗ |
| 36 | ಫೌಂಡ್ರಿ (ಯಂತ್ರಗಳ ಸಹಿತ ಅಥವಾ ರಹಿತ ಮೆಷಿನ್ ಶಾಫ್) ಗಳಲ್ಲಿ ಉದ್ಯೋಗ. |
| 37 | ಗಾಜು ಮತ್ತು ಗಾಜಿನ ಉತ್ಪನ್ನಗಳ ಸಂಸ್ಥೆಗಳಲ್ಲಿ ಉದ್ಯೋಗ |
| 38 | ಗ್ರಾನೈಟ್ ಕಲ್ಲುಗಳು ಹಾಗೂ ಮಾರ್ಬಲ್ ಉದ್ದಿಮೆಗಳಲ್ಲಿ ಉದ್ಯೋಗ. |
| 39 | ಕೈಮಗ್ಗ ಮತ್ತು ವಿದ್ಯುತ್‌ಚಾಲಿತ ಮಗ್ಗ [ಹತ್ತಿ] ಉದ್ದಿಮೆಗಳಲ್ಲಿ ಉದ್ಯೋಗ. |
| 40 | ಆಸ್ಪತ್ರೆಗಳು, ಪ್ರಸವಾಲಯಗಳು (ಮೆಟರ್ನಿಟಿ ಹೋಂಗಳು), ಶುಶ್ರೂಷಾಲಯ (ನರ್ಸಿಂಗ್ ಹೋಂಗಳು) ಕ್ಲಿನಿಕ್, ಹಾಗೂ ವ್ಯಸನ ಮುಕ್ತ ಕೇಂದ್ರಗಳಲ್ಲಿ ಉದ್ಯೋಗ. |
| 41 | ವಸತಿ ನಿಲಯಗಳು (ಹಾಸ್ಟೆಲ್‌ಗಳು), ಅತಿಥಿ ಗೃಹಗಳು, ಹೋಮ್ ಸ್ಟೇಗಳು, ಪೇಯಿಂಗ್ ಗೆಸ್ಟ್ ಸಂಸ್ಥೆಗಳು, ಸರ್ವೀಸ್ಡ್ ಅಪಾರ್ಟ್‌ಮೆಂಟ್‌ಗಳು, ರೆಸಿಡೆಂಟ್ಸ್ ಅಸೋಸಿಯೇಷನ್, ಮದುವೆ ಹಾಗೂ ಸಮುದಾಯ ಭವನಗಳಲ್ಲಿ ಉದ್ಯೋಗ. |
| 42 | ಹೋಟೆಲ್ / ವಸತಿ ಸಹಿತ ಹೋಟೆಲ್‌ಗಳು, ರೆಸ್ಟೋರೆಂಟ್ ಮೋಟೆಲ್‌ಗಳು, ಲಾಡ್ಜ್‌ಗಳು, ಡಾಬಾಗಳು, ಕ್ಯಾಂಟೀನ್, ಹೊರಾಂಗಣ ಆಹಾರ ತಯಾರಿಕೆ ಹಾಗೂ ಸರಬರಾಜು (ಕೇಟರಿಂಗ್) ಮತ್ತು ಸಂಬಂಧಪಟ್ಟ ಸಂಸ್ಥೆಗಳಲ್ಲಿ ಉದ್ಯೋಗ. |
| 43 | ಮಂಜುಗಡ್ಡೆ ಕಾರ್ಖಾನೆ (ಐಸ್ ಫ್ಯಾಕ್ಟರಿ) ಐಸ್ ಕ್ರೀಮ್ ಹಾಗೂ ಶೀತಲ ಸಂರಕ್ಷಣಾ ಸಂಸ್ಥೆಗಳಲ್ಲಿ ಉದ್ಯೋಗ. |
| 44 | ಖಂಡಸಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಉದ್ಯೋಗ. |
| 45 | ಬಟ್ಟೆ ಒಗೆಯುವ, ಡ್ರೈಕ್ಲೀನ್ ಮತ್ತು ಲಾಂಡ್ರಿ ಉದ್ದಿಮೆಗಳ ಕೆಲಸಗಳಲ್ಲಿ ಉದ್ಯೋಗ. |
| 46 | ಮದ್ಯ ತಯಾರಿಕಾ (ಡಿಸ್ಟಿಲರೀಸ್ ಹಾಗೂ ಬ್ರಿವರೀಸ್), ಬಾಟಲಿಂಗ್ ಹಾಗೂ ಪ್ಯಾಕಿಂಗ್ ಸಹಿತ ಉದ್ದಿಮೆಗಳ ಕೆಲಸಗಳಲ್ಲಿ ಉದ್ಯೋಗ. |
| 47 | ಆಯುರ್ವೇದ, ಯೋಗ, ಯುನಾನಿ, ಸಿದ್ಧ ಹೋಮಿಯೋಪತಿ (ಆಯುಷ್) ಹಾಗೂ ಅಲೋಪಥಿಕ್ ಔಷಧಿಗಳ ತಯಾರಿಕೆಯಲ್ಲಿ ಉದ್ಯೋಗ. (ಉತ್ಪಾದನೆ, ವಿತ್ತರಣೆ ಜಾಹಿರಾತು ವಿಭಾಗಗಳ ಸಹಿತ) |
| 48 | ಅಕ್ಕಿ, ಭತ್ತ, ಜೋಳ ಅಥವಾ ಇನ್ನಿತರ ಧಾನ್ಯಗಳಿಂದ ಮಂಡಕ್ಕಿ, ಅವಲಕ್ಕಿ, ಚುರುಮುರಾ, ಮುರುಮುರಾ ಹಾಗೂ ಇತರೆ ಉತ್ಪನ್ನಗಳನ್ನು ತಯಾರಿಸುವ ಉದ್ದಿಮಗಳ ಕೆಲಸದಲ್ಲಿ ಉದ್ಯೋಗ. |

| | |
|---|---|
| 49 | ಮೆಟಲ್ ರೋಲಿಂಗ್ ಅಂಡ್ ರೀರೋಲಿಂಗ್- [ಫೆರಸ್] ಉದ್ದಿಮೆಗಳಲ್ಲಿ ಉದ್ಯೋಗ. |
| 50 | ಮೆಟಲ್ ರೋಲಿಂಗ್ ಅಂಡ್ ರೀರೋಲಿಂಗ್ ಉದ್ದಿಮೆಗಳಲ್ಲಿ ಉದ್ಯೋಗ. [ನಾನ್-ಫೆರಸ್] |
| 51 | ಲಘು ಸಿಮೆಂಟ್ ಸ್ಥಾವರಗಳಲ್ಲಿ ಉದ್ಯೋಗ. |
| 52 | ಮೊಸಾಯಿಕ್ ಹಂಚುಗಳು, ಎಲ್ಲಾ ರೀತಿಯ ನೆಲ ಹಾಸು ಹಂಚುಗಳು, ಹೊಳಪಿನ ಹಂಚುಗಳ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ. |
| 53 | ಎಣ್ಣೆ ಮಿಲ್‌ಗಳಲ್ಲಿ ಉದ್ಯೋಗ. |
| 54 | ಪೆಟ್ರೋಲ್, ಡೀಸೆಲ್ ಆಯಿಲ್ ಮತ್ತು ಎಲ್.ಪಿ.ಜಿ. ಪಂಪ್‌ಗಳಲ್ಲಿ ಉದ್ಯೋಗ. |
| 55 | ಪ್ಲಾಸ್ಟಿಕ್, ಪಾಲಿ ಪ್ಲಾಸ್ಟಿಕ್, ರಬ್ಬರ್, ಪಿವಿಸಿ ಪೈಪ್ಸ್ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ. |
| 56 | ಮುದ್ರಣ ಹಾಗೂ ಪ್ರಸರಣಾ ಉದ್ದಿಮೆಗಳಲ್ಲಿ ಉದ್ಯೋಗ. |
| 57 | ಖಾಸಗಿ ವಿತ್ತ ನಿಗಮಗಳು, (ಫೈನಾನ್ಸ್ ಕಾರ್ಪೋರೇಷನ್) ಚಿಟ್ ಫಂಡ್‌ಗಳು ಹಾಗೂ ಕಾನೂನು ಬದ್ಧ ಬ್ಯಾಂಕಿಂಗ್ ರಹಿತ ನಗದು ವಹಿವಾಟು ಸಂಸ್ಥೆಗಳಲ್ಲಿ ಉದ್ಯೋಗ. |
| 58 | ಶೌಚಾಲಯಗಳು, ಸ್ನಾನಗೃಹಗಳು, ಒಳಚರಂಡಿಗಳನ್ನು ಶುಚಿ ಮಾಡುವ (Scavenging) ಕೆಲಸಗಳಲ್ಲಿ ಉದ್ಯೋಗ. (ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೊರತುಪಡಿಸಿ). |
| 59 | ಹಾಲು ಶೇಖರಣೆ, ಸಂಸ್ಕರಣೆ ಹಾಗೂ ವಿತರಣಾ ಪ್ರಕ್ರಿಯೆಯ ಉದ್ದಿಮೆಗಳಲ್ಲಿ ಉದ್ಯೋಗ. |
| 60 | ಸಾರ್ವಜನಿಕ ಸಾರಿಗೆ ಸಂಸ್ಥೆಗಳ ಉದ್ದಿಮೆಗಳಲ್ಲಿ ಉದ್ಯೋಗ. |
| 61 | ಕಾಗದ, ಪಲ್ಪ್ ಕಾಗದ, ರಟ್ಟಿನ ಹಲಗೆ (ಕಾರ್ಡ್‌ಬೋರ್ಡ್), ಹುಲ್ಲಿನ ಹಲಗೆ (ಸ್ಟ್ರಾ ಬೋರ್ಡ್) ಮತ್ತು ನ್ಯೂಸ್ ಪ್ರಿಂಟ್ ಉದ್ದಿಮೆಗಳಲ್ಲಿ ಉದ್ಯೋಗ. |
| 62 | ಅಕ್ಕಿ, ಧಾನ್ಯಗಳು ಮತ್ತು ಬೇಳೆ ಗಿರಣಿ ಉದ್ದಿಮೆಗಳಲ್ಲಿ ಉದ್ಯೋಗ. |
| 63 | ರಬ್ಬರ್ ಉತ್ಪನ್ನಗಳು (ಫೋಮ್ ಮತ್ತು ಕಾಯರ್ ರಬ್ಬರ್ ಸಹಿತ) ಉದ್ದಿಮೆಗಳಲ್ಲಿ ಉದ್ಯೋಗ. |
| 64 | ಔಷಧಿಗಳು, ಗೃಹಪಯೋಗಿ ವಸ್ತುಗಳ ವೃತ್ತಿಪರ ಪ್ರವರ್ತಕ ಮತ್ತು ಮಾರಾಟದಲ್ಲಿ ಉದ್ಯೋಗ. |
| 65 | ಭದ್ರತಾ ಏಜೆನ್ಸಿಗಳಲ್ಲಿ ಉದ್ಯೋಗ. (ಕಛೇರಿ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಏಜೆನ್ಸಿಯ ಮೂಲಕ ನಿಯೋಜಿಸಿಕೊಳ್ಳುವ ಎಲ್ಲಾ ಸಂಸ್ಥೆಗಳು ಹಾಗೂ ಉದ್ದಿಮೆಗಳ ಸಹಿತ). |
| 66 | ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಉದ್ಯೋಗ. |
| 67 | ಸ್ಪಿನ್ನಿಂಗ್ ಮಿಲ್ ಉದ್ದಿಮೆಗಳಲ್ಲಿ ಉದ್ಯೋಗ. |
| 68 | ಸ್ಪನ್ ಪೈಪುಗಳು, ಕಾಂಕ್ರೀಟ್ ಪೈಪುಗಳು, ಸಾನಿಟರಿ ಫಿಟ್ಟಿಂಗ್‌ಗಳು, ಪ್ಲೈನ್ ಸಿಮೆಂಟ್ ಕಾಂಕ್ರೀಟ್ (ಪಿ.ಸಿ.ಸಿ.) ಹಾಗೂ ರೀ-ಇನ್‌ಫೋರ್ಸ್‌ಡ್ ಸಿಮೆಂಟ್ ಕಾಂಕ್ರೀಟ್ (ಆರ್.ಸಿ.ಸಿ). ಪೈಪುಗಳು ಮತ್ತು ಕಂಬಗಳ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ. |
| 69 | ಲೋಹದ ಅಲ್ಮೇರಾಗಳು, ಕುರ್ಚಿಗಳು, ಮೇಜುಗಳು ಹಾಗೂ ಇತರೆ ಪೀಠೋಪಕರಣಗಳನ್ನು ಉತ್ಪಾದಿಸುವ ಉದ್ದಿಮೆಗಳಲ್ಲಿ ಉದ್ಯೋಗ. |
| 70 | ಕಲ್ಲು ಒಡೆಯುವುದು ಮತ್ತು ಕಲ್ಲು ಪುಡಿ ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ |
| 71 | ಚರ್ಮ ಹದ ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ. |
| 72 | ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ |
| 73 | ರೇಷ್ಮೆ ಬಟ್ಟೆಗಳ (ಸಿಲ್ಕ್) ಉದ್ದಿಮೆಗಳಲ್ಲಿ ಉದ್ಯೋಗ |
| 74 | ಹೆಂಚು ತಯಾರಿಕೆ ಉದ್ದಿಮೆಗಳಲ್ಲಿ ಉದ್ಯೋಗ |
| 75 | ಶೇಂದಿ ಇಳಿಸುವ ಉದ್ದಿಮೆಗಳಲ್ಲಿ ಉದ್ಯೋಗ |
| 76 | ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಉದ್ಯೋಗ |
| 77 | ಸಹಕಾರ ಸೊಸೈಟಿಗಳಲ್ಲಿ ಉದ್ಯೋಗ. |

| | |
|---|---|
| 78 | ಚಿನ್ನ ಮತ್ತು ಬೆಳ್ಳಿ ಆಭರಣಗಳ ತಯಾರಿಕೆ ಮತ್ತು ಹರಳುಗಳು, ವಜ್ರಗಳನ್ನು ಕತ್ತರಿಸುವುದು, ಹೊಳಪು ಗೊಳಿಸುವ ಉದ್ದಿಮೆಗಳಲ್ಲಿ ಉದ್ಯೋಗ |
| 79 | ಬಟ್ಟೆಗಳಿಗೆ ಬಣ್ಣ ಹಾಕುವ (ಡೈ) ಮತ್ತು ಅಚ್ಚು ಹಾಕುವ (ಪ್ರಿಂಟ್) ಹಾಕುವ ಉದ್ದಿಮೆಗಳಲ್ಲಿ ಉದ್ಯೋಗ |
| 80 | ಸರಕು ಸಾಮಗ್ರಿಗಳ ಹೇರುವ ಮತ್ತು ಇಳಿಸುವ (ಲೋಡಿಂಗ್ ಮತ್ತು ಅನ್‌ಲೋಡಿಂಗ್) ಕೆಲಸಗಳಲ್ಲಿ ಉದ್ಯೋಗ |

ಕಲಂ –2 (ಜಿ) ಸಹವಾಚಿತ ಕಲಂ–27 (ಭಾಗ–2)

| ಕ್ರ.ಸಂ | ಅನುಸೂಚಿತ ಉದ್ದಿಮೆಗಳ ಹೆಸರು |
|---|---|
| 1 | ಬೇಸಾಯ ಮತ್ತು ಸಂಬಂಧಿತ ಕೆಲಸಗಳಲ್ಲಿ ಉದ್ಯೋಗ |
| 2 | ರೇಷ್ಮೆ ಘಟಕಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಉದ್ಯೋಗ ಭಾಗ–1 |
| 3 | ರೇಷ್ಮೆ ಘಟಕಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಉದ್ಯೋಗ ಭಾಗ–2 |